



(6ನೇ ಪುಟದಿಂದ)

ಇದನ್ನು ನೋಡಿದ ಕೂಡಲೇ ಕ್ಯಾಮರಾದಿಂದ ಕ್ಲಿಕ್ಕಿಸಿ, ಫೋಟೋದಲ್ಲಿ ಸೆರೆ ಹಿಡಿಯಬಹುದು. ಅದೇನೂ ಕಷ್ಟದ ಸಂಗತಿ ಅಲ್ಲವೇ ಅಲ್ಲ. ಆದರೆ ಅಂತಹ ದೃಶ್ಯ ಕಾವ್ಯಗಳ ಮರು ಸೃಷ್ಟಿಯನ್ನು ಸೂಜಿ ಮತ್ತು ದಾರಗಳಿಂದ ಮಾಡಲು ಸಾಧ್ಯವೇ?

'ಸಾಧ್ಯ' ಎಂದು ಸಾಬೀತು ಮಾಡಿರುವ ಕೌಶಲ್ಯಪೂರ್ಣ ಹೊಲಿಗೆ ಕಲಾವಿದೆ –ಜಿಲ್ ಡ್ರೇಪರ್. ಎರಡು ಮಕ್ಕಳ ತಾಯಿ, ನಾಲ್ಕು ಮೊಮ್ಮಕ್ಕಳ ಅಜ್ಜಿಯಾಗಿರುವ 62ರ ಹರೆಯದ ಈಕೆಗೆ ಹೊಲಿಗೆಯಲ್ಲಿ ಅಪರಿಮಿತ ಆಸಕ್ತಿ. ಗ್ರಾಮೀಣ ಬದುಕನ್ನು ಬಿಂಬಿಸುವ ಎಲಿಜಬೆತ್ ಎಂಬ್ರಾಯಿಡರಿಗಳು ಜಿಲ್ ಮೇಲೆ ಪ್ರಭಾವ ಬೀರಿದ್ದವು. ಪ್ರಸವದ ನಂತರ ಬಾಣಂತಿಯಾದಾಗ ಆವರಿಸಿದ ಖಿನ್ನತೆ ಮರೆ ಮಾಡಲೆಂದೇ ಈಕೆ ಬಟ್ಟೆಯ ಮೇಲೆ ಎಂಬ್ರಾಯಿಡರಿ ಮಾಡುವ ಹವ್ಯಾಸಕ್ಕೆ ಮೊರೆ ಹೋದಳು. ಈ ಹವ್ಯಾಸವೇ ಆಕೆಗೆ ಮುಂದೆ ವೃತ್ತಿ ಪರತೆಯನ್ನು ತಂದುಕೊಟ್ಟಿತು.

ಜಿಲ್ ಡ್ರೇಪರ್ ಬರೀ ಸೂಜಿ ಮತ್ತು ದಾರವನ್ನು ಬಳಸಿ, ಹೊಲಿಗೆ ಯಂತ್ರದಿಂದ, ಬಟ್ಟೆಯ ಮೇಲೆ ಹಳ್ಳಿ ದೃಶ್ಯ ವೈಭವವನ್ನು ಥೇಟ್ ಫೋಟೋದ ರೀತಿಯಲ್ಲೇ ಎಲ್ಲರೂ ಅಚ್ಚರಿಗೊಳ್ಳುವ ಹಾಗೆ ಮಾಡಬಲ್ಲಳು. ಕೇವಲ 15X30 ಇಂಚಿನ ಸಿಲ್ಕ್ ಬಟ್ಟೆಯ ಮೇಲೆ ಫೋಟೋ ನೋಡಿ ಈಕೆ ಮಾಡಿರುವ ಎಂಬ್ರಾಯಿಡರಿ ಚಿತ್ರ ಜವನಿಕೆಗಳು ಎಂಥವರನ್ನೂ ಮೂಕ ವಿಸ್ಮಿತರನ್ನಾಗಿ ಮಾಡಿಬಿಡುತ್ತವೆ. ಈಕೆ ಪ್ರಕೃತಿ ಸೊಬಗನ್ನು ಹೊಲಿಗೆಯಲ್ಲಿ ಒಡಮೂಡಿಸುವಾಗ ಬಳಸುವ ನೂರಾರು ದಾರಗಳ ವರ್ಣ ಸಂಯೋಜನೆಯಂತೂ ವರ್ಣಿಸಲಸದಳ. ನಿಜವಾದ ದೃಶ್ಯದ ಫೋಟೋ ಹಾಗೂ ಎಂಬ್ರಾಯಿಡರಿ ಮಾಡಿದ ಬಟ್ಟೆಯ ಫೋಟೋಗೂ ವ್ಯತ್ಯಾಸವನ್ನು ಕಂಡು ಹಿಡಿಯುವುದು ಕಷ್ಟ ಎನ್ನುವಂತಿದೆ.

ಪ್ರತಿದಿನ ಸುಮಾರು ಆರು ತಾಸುಗಳನ್ನು ಹೊಲಿಯುತ್ತಲೇ ಕಳೆಯುವ ಜಿಲ್‌ಗೆ ಪ್ರತಿಯೊಂದು ಚಿತ್ರವನ್ನು ಮುಗಿಸಿದಾಗ ಥ್ರಿಲ್ ಆಗುತ್ತದೆಯಂತೆ. 'ಪೆನ್ಸಿಲ್ ಅಥವಾ ಬಣ್ಣದ ಕುಂಚವೇನೋ ಎನ್ನುವ ರೀತಿಯಲ್ಲಿ ನಾನು ಹೊಲಿಗೆ ಯಂತ್ರವನ್ನು ಬಳಸಿಕೊಳ್ಳುತ್ತೇನೆ. ನನ್ನ ಪ್ರತಿಯೊಂದು ರಚನೆಗಳೂ ಅನನ್ಯ' ಎಂದು ಹೆಮ್ಮೆಯಿಂದ ನುಡಿಯುವ ಜಿಲ್ ಡ್ರೇಪರ್‌ಗೆ ಜನರು ಅಚ್ಚರಿಪಡುವ ರೀತಿಯನ್ನು ನೋಡುವುದೇ ಅಪಾರ ಖುಶಿ ನೀಡುತ್ತದಂತೆ!

1978ರಿಂದ ಬ್ರಿಟನ್ ಆರ್ಟ್ ಗ್ಯಾಲರಿಗಳಲ್ಲಿ ಈಕೆಯ ಎಂಬ್ರಾಯಿಡರಿ ಸೃಷ್ಟಿಯ ಚಿತ್ರಗಳು ಪ್ರದರ್ಶಿತವಾಗಿ ಹಲವಾರು ಕಲಾರಸಿಕರ ಮನೆಯ ಗೋಡೆಗಳನ್ನು ಅಲಂಕರಿಸಿವೆ. ಸದ್ಯ ಬ್ರಿಟನ್ನಿನಲ್ಲಿ ಪತಿ ಪೀಟರ್‌ನೊಂದಿಗೆ ವಾಸವಾಗಿರುವ ಜಿಲ್‌ಗೆ ಮುಂದೆ ತನ್ನ ಹೊಲಿಗೆಗೆ ಸ್ಫೂರ್ತಿ ನೀಡುವ ಹಳ್ಳಿ ಸಾಫೋಕ್‌ನಲ್ಲಿ ನೆಲೆಸುವ ಇರಾದೆ ಇದೆಯಂತೆ.

(ಇಂಟರ್‌ನೆಟ್ ಮಾಹಿತಿ)

